ಗಡಿಯಾರ ಆಗಲೇ ಒಂಬತ್ತು ಗಂಟೆ ತೋರಿಸುತ್ತಿತ್ತು. ಮನೆಯವರೆಲ್ಲ ಗಡಿಬಿಡಿಯಿಂದ ಮದುವೆಗೆ ತೆರಳಲು ಸಿದ್ಧರಾಗುತ್ತಿದ್ದರು. ಸುಭದ್ರ ಮಲಗಿದಲ್ಲಿಂದಲೇ ಎಲ್ಲ ಗಮನಿಸುತ್ತಿದ್ದರು. ಸುಬ್ರಮಣಿ ಒಳಬಂದು, "ನಿನ್ನ ಬಿಟ್ಟು ಮದುವೆಗೆ ಹೋಗೋಕೆ ಬೇಜಾರು ಕಣೇ" ಎಂದು ಸಪ್ಪೆ ಮೋರೆ ಮಾಡಿದರು. ಸುಭದ್ರ, "ಇನ್ನು ಸ್ವಲ್ಪ ದಿನಗಳಷ್ಟೇ. ಆಮೇಲೆ ಒಟ್ಟಿಗೆ ಹೋದರಾಯಿತು" ಎಂದವರೇ ಪರೀಕ್ಷಾ ದೃಷ್ಟಿಯಿಂದ ಪತಿಯನ್ನು ನೋಡಿ, "ಕುರ್ತಾದ ಬಟನ್ ಸರಿಪಡಿಸಿಕೊಳ್ಳಿ. ಸೆಂಟ್ ಹಾಕಿಕೊಳ್ಳಿ" ಎಂದರು. ಸರಿಪಡಿಸಿಕೊಂಡ ಸುಬ್ರಮಣಿ ಹುಸಿಮುನಿಸಿನಿಂದ, "ಹುಶಾರಿಲ್ಲದಿದ್ದರೂ ನನ್ನ ಗಮನಿಸೋದು ಬಿಡಬೇಡ ನೀನು" ಎಂದವರೇ ರೂಮಿನ ಬಾಗಿಲನ್ನು ಕೊಂಚ ಓರೆಮಾಡಿ ಸುಭದ್ರಮ್ಮನ ಹಣೆಯ ಮೇಲೆ ಹೂಮುತ್ತೊಂದನ್ನಿತ್ತರು. ಅಷ್ಟರಲ್ಲೇ, "ಅಜ್ಜೀ" ಎನ್ನುತ್ತ ಮಕ್ಕಳ ದಂಡೇ ಬಂತು. ಎಲ್ಲರೂ ಸುಂದರವಾಗಿ ಅಲಂಕರಿಸಿಕೊಂಡಿದ್ದರು. ಮಗ ಬಂದು, "ಅಮ್ಮಾ, ನಿನ್ನ ತಿಂಡಿ, ಮಾತ್ರೆ ಆಯಿತು ತಾನೇ? ನಾವು ಆದಷ್ಟು ಬೇಗ ಬಂದ್ಬಿಡ್ತೀವಿ. ವಲ್ಲಿ ಬಂದಿದಾಳೆ. ತಂಗವೇಲು ಕೂಡ ಬರ್ತಾನೆ. ರೆಸ್ಟ್ ತೊಗೊ" ಎಂದು ಹೇಳಿ ಎಲ್ಲೆಡೆ ಕಣ್ಣಾಡಿಸಿ ಹೊರಟ. ಸೊಸೆ ಬಾಗಿಲ ಮರೆಯಿಂದ ಮುಖವನ್ನಷ್ಟೇ ಒಳಗೆ ತೂರಿಸಿ, "ಬರ್ತೀವಿ ಅತ್ತೆ. ಜೋಪಾನ ವಲ್ಲಿ" ಎಂದವಳೇ ಹೊರಗೋಡಿದಳು. ಆ ಚಿನ್ನದ ಬಣ್ಣದ ಬೆನ್ನು ತೋರಿಸುವ ಜಾಳಿಗೆ ಬ್ಲೌಸ್ ತೊಟ್ಟಿರಬೇಕು. ಮುಖದ ಮೇಲೊಂದು ಮುಗುಳ್ನಗು ಮೂಡಿತು. ಒಂದ್ಸಲ 'ಛೆ! ಈ ಹಾಳು ಹೃದಯದ ತೊಂದರೆಯಿಂದ ನಾನು ಮನೇಲೆ ಉಳಿಯುವಂತಾಯಿತು. ಇಲ್ಲವಾದರೆ ಕಾಮಾಕ್ಷಿಯ ಮಗಳ ಮದುವೆಗೆ ಹೊಸ ರೇಷ್ಮೆ ಸೀರೆಯುಟ್ಟು ಹೊರಡುತ್ತಿದ್ದೆ' ಎನಿಸದೇ ಇರಲಿಲ್ಲ.

"ವಲ್ಲಿ, ಟೀವಿಲಿ ಯಾವ್ದಾದ್ರೂ ಹಳೇ ಸಿನಿಮಾ ಬರ್ತಿದ್ರೆ ಹಾಕು" ಎಂದವರೇ ಬಚ್ಚಲಿಗೆ ನಡೆದರು. "ಬಾಗಿಲು ಹಾಕಿಕೊಳ್ಳಬೇಡಿ ಅಮ್ಮ. ನಾನಿಲ್ಲೇ ಇರ್ತೀನಿ" ಎನ್ನುತ್ತಲೇ ಬಂದ ವಲ್ಲಿ ಕೈ ಹಿಡಿದಳು. ಹೃದಯ ತುಂಬಿ ಬಂದ ಹಾಗಾಯ್ತು. 'ಯಾವ ಜನ್ಮದ ಋಣಾನುಬಂಧವೋ... ಹುಡುಗಿ ಎಷ್ಟು ಚೆನ್ನಾಗಿ ನೋಡ್ಕೋತಿದಾಳೆ. ಕೆಲಸದವಳು ಎನ್ನುವ ಹಾಗೇ ಇಲ್ಲ' ಎಂದುಕೊಳ್ಳುತ್ತ ಅವಳನ್ನೇ ದಿಟ್ಟಿಸಿದರು. ನಸುಗಪ್ಪಾದರೂ ರಾಜಕಳೆ ಮುಖದಲ್ಲಿ. ವಿಶಾಲ ಕಂಗಳ ಮೇಲೆ ಕಾಮನಬಿಲ್ಲಿನಂಥ ಹುಬ್ಬು, ಸಂಪಿಗೆ ಮೂಗಿಗೆ ಶೋಭೆ ತರುವ ನಕಲಿ ಹರಳಿನ ಮೂಗುತಿ, ತಿದ್ದಿ ತೀಡಿದಂಥ ಮೈಮಾಟ. ತನಗೆ ಹೃದಯದ ತೊಂದರೆ ಆರಂಭವಾದಾಗಿನಿಂದ ಸೇವೆ ಮಾಡಿದವಳು. ಸ್ಟಂಟ್ ಅಳವಡಿಸಿದಾಗಲೂ ನೋಡಿಕೊಂಡದ್ದು ಇವಳೇ. ಸೊಸೆ ದೂರದಿಂದಲೇ ಮಾತನಾಡಿಸಿದ್ದಿತ್ತು. ಇವಳಿಲ್ಲದಿದ್ದರೆ... ಎನಿಸಿ ನಿಟ್ಟುಸಿರು ಬಿಟ್ಟರು.

ತಿರುಗಿ ಬರುವಷ್ಟರಲ್ಲಿ ವಲ್ಲಿ ಹಳೆಯ ಸಿನಿಮಾ ಹಾಕಿ ಎದುರಿಗೆ ಆರಿಸಲು ಅಕ್ಕಿ ಇಟ್ಟುಕೊಂಡು ಕುಳಿತಿದ್ದಳು. ಸುಭದ್ರಮ್ಮ ಮೆತ್ತಗೆ ಮಂಚವನ್ನೇರಿ, "ವಲ್ಲಿ, ಸ್ವಲ್ಪ ನೀರು ಕೊಡು" ಎಂದರು. ಕೇಳಿಸದಂತೆ ಕುಳಿತವಳ ಕಣ್ಣು ಕೋಪದಿಂದ ಕೆಂಪಡರಿ ಹನಿಗೂಡುತ್ತಿದ್ದವು. ಅಚ್ಚರಿಯಿಂದ ಅತ್ತ ನೋಡಿದರು. ಸೌದಾಮಿನಿಯ ಖ್ಯಾತ ಚಿತ್ರ 'ಮನೆಯ ಮಂದಾರ' ಪ್ರಸಾರವಾಗುತ್ತಿತ್ತು. ನಾಲ್ಕು ಬೆರಳುಗಳಿಂದ ಎಳೆದು ಸುಂದರವಾದ ಹಸೆ ಬಿಡಿಸಿದಳು ಸೌದಾಮಿನಿ. ಜೊತೆಗೆ ಮಧುರವಾದ ಹಾಡು. 'ಭೂದೇವಿಗೆ ಮಣಿಹಾರ ಈ ರಂಗವಲ್ಲಿ, ಅಂಗಳಕೆ ಸಿಂಗಾರ ಈ ರಂಗವಲ್ಲಿ...' ಎಂದು ಮುಂದುವರೆಯುತ್ತಿದ್ದಂತೆ ವಲ್ಲಿಯ ಕಣ್ಣುಗಳು ಕೊಳಗಳಾದವು. "ವಲ್ಲೀ... ಏನಾಯ್ತೆ?" ಎಂದು ಕೂಗಿದರು ಸುಭದ್ರಮ್ಮ. ಅವಳು ಇಲ್ಲಿ ಕೆಲಸ ಮಾಡುತ್ತಿದ್ದು ಆಗಲೇ ನಾಲ್ಕೈದು ವರ್ಷಗಳಾಗಿದ್ದವು. ಒಮ್ಮೆಯೂ ಹೀಗಾಡಿರಲಿಲ್ಲ.